**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 6296/ 2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಉಮೇಶ್ ಆರ್ ಬಿ | **ಚಾ.ಸಾ.-19** |
| ತಂದೆ ಹೆಸರು | - | ರಾಯಪ್ಪ | **ಫ್ರಾ.ಸಾ.-11** |
| ವಯಸ್ಸು | - | 40 ವರ್ಷ | |
| ಉದ್ಯೋಗ | - | ಪಿ ಎಸ್ ಐ | |
| ವಾಸ ಸ್ಥಳ | - | ಪಾಂಡವಪುರ | |

ದಿನಾಂಕಃ 10.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು 28.07.2021 ರಿಂದ 12.10.2023 ರವರೆಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಚಾ.ಸಾ. 18 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಆರೋಪಿತರ ವಿರುದ್ಧ ತನಿಖಾ ಕಾಲದಲ್ಲಿ ಸಾಕ್ಷ್ಯದಾರಗಳು ಲಭ್ಯವಿದ್ದ ಕಾರಣ ದಿನಾಂಕಃ 06.09.2021 ರಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ MKJ ರವರಿಂದ**

ನಾನು ಚಾ.ಸಾ. 18 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ನಾನು, ಈ ಕಡತವನ್ನು ಪಡೆದ ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ಘಟನಾ ಸ್ಥಳದಲ್ಲಿ ರಸ್ತೆ ತೆರವು ಮಾಡುತ್ತಿದ್ದ ಸಂದರ್ಭದಲ್ಲಿ ಆರೋಪಿ ಗಲಾಟೆ ಮಾಡಿರುತ್ತಾರೆಂಬುದಾಗಿ ನಿಮ್ಮ ದೋಷಾರೋಪಣೆ ಪಟ್ಟಿಯಲ್ಲಿ ತಿಳಿಸಿರುತ್ತೀರಿ ಸದರೀ ರಸ್ತೆ ಎಷ್ಟು ಅಡಿ ಅಗಲ ಮತ್ತು ಎಷ್ಟು ಅಡಿ ಉದ್ದ ಇತ್ತು ಎಂಬುದಾಗಿ ನೀವು ದಾಖಲೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ನಂತರ ಸಾಕ್ಷಿ ಮುಂದುವರೆದು ಕಾರ್ಯನಿರ್ವಹಣಾ ಅಧಿಕಾರಿಯವರು ಒತ್ತುವರಿ ತೆರವುಗೊಳಿಸುವ ಸಂದರ್ಭದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಬಂದೋಬಸ್ತ್ ನೀಡುವಂತೆ

ಕೋರಿಕೆ ಪತ್ರವನ್ನು ಸಲ್ಲಿಸಿದ ಮೇರೆಗೆ ಪೋಲೀಸ ಅಧಿಕಾರಿ ಮತ್ತು ಸಿಬ್ಬಂದಿಯವರು ಸ್ಥಳಕ್ಕೆ ಹೋಗಿರುವುದು ಕಂಡು ಬಂದಿರುತ್ತದೆಯೆಂದು ನುಡಿಯತ್ತಾರೆ.  ದಿನಾಂಕಃ 16.01.2021 ರಂದು ಕೊರೋನಾ ಸಾಂಕ್ರಾಮಿಕ ರೋಗ ಇತ್ತು ಎಂದರೆ ಸಾಕ್ಷಿ ನನಗೆ ಖಚಿತವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಮಾನ್ಯ ಉಚ್ಚ ನ್ಯಾಯಾಲಯ ಕೊರೋನಾ ಸಂದರ್ಭದಲ್ಲಿ ಯಾವುದೇ ಒತ್ತುವರಿಯನ್ನು ತೆರವುಗೊಳಿಸಬಾರದೆಂಬುದಾಗಿ ಆದೇಶ ಹೊರಡಿಸಿರುವ ವಿಚಾರ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಒತ್ತುವರಿಯನ್ನು ತೆರವು ಮಾಡದಂತೆ ತಾಲ್ಲೂಕು ಕಾನೂನು ಸೇವೆಗಳ ಪ್ರಾಧಿಕಾರ ಮದ್ದೂರು ರವರು ಮಾಡಿರುವ ಆದೇಶ ಮತ್ತು ಮಾನ್ಯ ಉಚ್ಚ ನ್ಯಾಯಾಲಯ ಮಾಡಿರುವ ಆದೇಶವನ್ನು ನಿಮ್ಮ ಠಾಣೆಗೆ ಆರೋಪಿ 1 ರವರು ನೀಡಿರುತ್ತಾರೆಂದರೆ ಸರಿಯಲ್ಲ.  ಸಾರ್ವಜನಿಕ ರಸ್ತೆ ಇತ್ತು ಎಂಬುದರ ಬಗ್ಗೆ ನೀವು ಯಾವುದಾದರೂ ದಾಖಲೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ.  ಸದರೀ ರಸ್ತೆಯ ಅಕ್ಕಪಕ್ಕದಲ್ಲಿ ಸಾರ್ವಜನಿಕರು ವಾಸಿಸುತ್ತಿದ್ದಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಈ ಪ್ರಕರಣದಲ್ಲಿ ಚಾ.ಸಾ. 9 ಮತ್ತು 10 ರವರು ಮಾತ್ರ ಸಾರ್ವಜನಿಕರಾಗಿದ್ದು ಉಳಿದ ಎಲ್ಲಾ ಸಾಕ್ಷಿದಾರರು ನಿಮ್ಮ ಪೋಲೀಸ್ ಸಿಬ್ಬಂದಿಗಳು ಮತ್ತು ಪಂಚಾಯತಿ ಸಿಬ್ಬಂದಿಗಳು ಎಂದರೆ ಸರಿ.  ನಾನು ಈ ಪ್ರಕರಣದ ಕಡತವನ್ನು ಚಾ.ಸಾ. 18 ರವರಿಂದ ಪಡೆದುಕೊಂಡ ನಂತರ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ನಾನು ಠಾಣೇಗೆ ಭೇಟಿ ನೀಡಿರುವುದಿಲ್ಲ.  ತನಿಖಾ ಕಾಲದಲ್ಲಿ ಸಂಗ್ರಹಿಸಲಾದ ದಾಖಲೆಗಳ ಆಧಾರದ ಮೇಲೆ ಪ್ರಕರಣ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆಯೆಂದು ನುಡಿಯುತ್ತಾರೆ.  ಎಲ್ಲಿ ಒತ್ತುವರಿ ಆಗಿತ್ತು ಎಂಬುದರ ಬಗ್ಗೆ ಯಾವುದೇ ನಕಾಶೆಯನ್ನು ತಯಾರು ಮಾಡಿರುವುದಿಲ್ಲ ಎಂದರೆ ಸರಿ. ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುವ ಬಗ್ಗೆ ಯಾವುದೇ ಛಾಯಾಚಿತ್ರಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿ.  ಸಾಕ್ಷಿ ಮುಂದುವರೆದು, ಘಟನೆಯ ಸ್ಥಳವನ್ನು ಪಂಚನಾಮೆಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆಯೆಂದು ನುಡಿಯುತ್ತಾರೆ.  ಮಹಜರ್ ನ್ನು ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಿನಾಂಕಃ 16.01.2021 ರಂದು ಆರೋಪಿತರು ಚಾ.ಸಾ. 1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.  ಆರೋಪಿತರು ಚಾ.ಸಾ. 1 ರವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ ಎಂದರೆ ಸರಿಯಲ್ಲ.  ಆರೋಪಿಗಳಿಗೆ ಶಿಕ್ಷೆ ಕೊಡಿಸಲು ನೀವು ಮತ್ತು ನಿಮ್ಮ ಸಿಬ್ಬಂದಿಗಳು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಚಾ.ಸಾ. 1 ರವರು  ಸರಕಾರಿ ಅಧಿಕಾರಿಯಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್  ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.